Mr. SPEAKER.—I have already dealt with that.

ಶ್ರೀ ಎಸ್. ಶಿವಪ್ಪ.—ಆ ಸದಸ್ಯರು ತಮಗೆ ಕಾಗದ ಬರೆದಿದ್ದಾರೆ. ಅದರ ಬಗ್ಗೆ ಏನೂ ತೀರ್ಪು ಕೊಟ್ಟಿಲ್ಲ. ಆ ಸದಸ್ಯರು ಬರೆದ ಕಾಗದಕ್ಕೆ ಉತ್ತರ ಕೊಟ್ಟಿಲ್ಲ. ಶ್ರೀ ಶಿವಣ್ಣನವರು ಸಾರ್ವಜನಿಕ ಕೆಲಸವನ್ನು ಮಾಡತಕ್ಕ ಕಾಲದಲ್ಲಿ ಮಂತ್ರಿಗಳೊಬ್ಬರಿಂದ ಅಪಮಾನಿತರಾದಂಥ ಕಾಲದಲ್ಲ...

Mr. SPEAKER.—Am I bound to reply even if matters are beyond purview ?

† **Sri S. SIVAPPA.**—I am apprising the Speaker of the situation which has arisen ; I am just bringing to the notice of the Speaker that such things should not happen and I am asking what is the remedy open to us. Should a member go to the Chamber of a Minister just to get a rebuke and to be asked to get out ? These are all things to be discussed ; these things cannot be overloked so soon. Otherwise, democracy will be squashed in this country. When an Hon'ble Member of this House goes to the Chamber of a Minister to represent the grievances of his constituency, which he is entitled to, should he be rebuked, asked to get out of the Chamber or some such thing ? Can we tolerate such things, that too, in the precincts of Vidhana Soudha.

Sri G. V. GOWDA (Palya).—We want to know the facts.

Sri S. SIVAPPA.—There are very good precedents in other Legislatures where similar instances had taken place and such issues have been referred to the Privileges Committee also. Such an instance happened in the Bihar Legislative Council on the 24th April 1956. There, an Hon'ble Member of the Legislative Council went to a hospital to get treatment by a doctor. The doctor used an abusive language, telling the member What do you mean, coming here ? You members abuse in the Legislature. Is this the way you come here ?' Then the Hon'ble Member brought it to the notice of the House.

Mr. SPEAKER.—What is the citation ?

Sri S. SIVAPPA.—This is 'January-March 1960-Privilege Digest-Page 7:'.

Mr. SPEAKER.—I will look into it, as the Hon'ble Member has stated the facts.

Sri S. SIVAPPA.—The subject was discussed in the Legislative Council and there the Legislative Council decided that matter should be referred to the Privileges Committee. So when an ordinary doctor abused a member of the Legislative Council, such a matter was discussed in the Legislative Council and the Legislative Council thought that the privilege of the member and the privilege of the House were at stake. That was referred to the Privileges Committee. I am not going to discuss the decision of the Committee. Likewise, when an Hon'ble Member of this House Sri Sivanna went to the Chamber.....

Mr. SPEAKER. —Please don't mention the name. The citation is given ; I want to satisfy myself that the order passed is correct. The Hon'ble Member is citing authorities. I will apply my mind. I have disallowed it. I am now considering whether I should revise the order passed by me. After I revise my order, then the matter will come before the House.

Sri S. GOPALA SALENNA (Mudabidri).—Unless the name is given, the statement would be incomplete.

Sri C. J. MUCKANNAPPA.—This is an important matter. Let us know what the facts are.

Mr. SPEAKER.—Notice of breach of a privilege was given stating certain facts and mentioning that it was a matter of breach of privilege and that it should be referred to the Privileges Committee. I have disallowed it on the ground that it does not come within the limits of this question. Now he says that I must revise that order. For that, he is giving authorities in order to cinvince me. I will examine the position. If I revise the order, then it comes again before the House. I cannot permit disclosure of the facts even before I revise my order.

Sri S. M. KRISHNA.—Is it not open to any member of this House to get an opportunity to convince the peaker that there is a *prima facie* case for this matter to be referred to the Privileges Committee ? An earlier occasion the motion was disallowed now the chair has been good enough to reconsider that decision.....

Mr. SPEAKER.—I did not tell him anything. He may give any reason. I said that if there were any good reasons, I would consider the question of revising it.

Sri S. M. KRISHNA.—Now the question is wide open for any member of this House to convince the chair ; it cannot be confined to the Leader of the Opposition alone.

Mr. SPEAKER.—Am I to understand that there should be a dabate allowing every member to participate ?

Sri S. M. KRISHNA.—If other members also have certain facts, if certain facts are within their knowledge, they could certainly place them before the House.

Mr. SPEAKER.—Even if they are facts within the knowledge of members relating to the alleged incident covered by the motion, I am not going to allow any debate. If it is a question of bringing to my notice analogous facts covered by any motion of any House, I will consider it ; but if it is a question of debate referring to the facts of the incident now alleged, I am not going to allow any debete on these facts.

ಶ್ರೀ ಎಸ್. ಗೋಪಾಲಗೌಡ.—ತಾವು ಈಗ ಅಪ್ಪಣೆ ಕೊಡಿಸಿದಿರಿ, ನಾನು ಮೋಷನ್ ಡಿಸ್ ಅಲೋ ಮಾಡಿದ್ದೇನೆ ಎಂದು. ಏನು ಡಿಸ್ ಅಲೋ ಮಾಡಿದ್ದೀರಿ ಎನ್ನುವುದು ನಮಗೆ ಸ್ಪಷ್ಟವಾಗಿ ಗೊತ್ತಿಲ್ಲ. ಸಭೆಯ ಮುಂದೆ 180 ನೇ ರೂಲ್ ಪ್ರಕಾರ ಅದನ್ನು ಓದಿ ಹೇಳಿದ್ದರೆ ನಮಗೆ ಸ್ವಲ್ಪ ಮಟ್ಟಿಗೆ ಸಮಾಧಾನವಾಗುತ್ತಿತ್ತು. ನನಗೆ ಕೇಸ್ ಗೊತ್ತಿದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ನಾನು ತೀರ್ಮಾನಕ್ಕೆ ಬಂದಿದ್ದೇನೆ. ಒಬ್ಬ ಮಾನ್ಯ ಸದಸ್ಯರ ಪ್ರಿವಿಲೇಜ್ ಅಥವಾ ಹಕ್ಕು ಬಾಧ್ಯತೆಗೆ ಧಕ್ಕೆ ತರತಕ್ಕ ಸಂದರ್ಭ ಎನ್ನುವುದು ಎಂದು. ಆದುದರಿಂದ ನಾನು ಬಹಳ ಕಳಕಳಿಯಿಂದ ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ತಾವು ಈ ವಿಷಯದಲ್ಲಿ ಪುನರ್ವಿಮರ್ಶೆ ಮಾಡಿ ಆದನ್ನು ಪ್ರಿವಿಲೆಜ್‌ಮೋಷನ್ ಎಂದು ಒಪ್ಪಿಕೊಂಡು ಸಭೆಯಲ್ಲಿ ಚರ್ಚೆ ಮಾಡಬಹುದು, ಕಮಿಟಿಗೆ ರೆಫರ್ ಮಾಡಬಹುದು. ಅಂತೂ ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಸದಸ್ಯರಿಗೂ ಕ್ಷಮಾಪಣೆ ಕೊಡಬೇಕು, ಸಭೆಗೂ ಕೊಡಬೇಕು. ಇಲ್ಲದೆ ಹೋದರೆ ಬಹುಶಃ ಸದಸ್ಯರಿಗೆ ಯಾವ ರಕ್ಷಣೆಯೂ ದೊರೆಯಲಾರದು. ಇದು ನನ್ನ ಭಯ.

Sri S. SIVAPPA.—Sir, this is one thing I have pointed out. Then, there are other instances also defining what is 'pricincts'

Sri C. J. MUCKANNAPPA.— On a point of order, Sir. I would like to draw the attention of the chair to rule 180, and according to this there are no powers under which the chair can revise its order.

Mr. SPEAKER.—That is a very good point and I will consider that also (*laughter*). If the chair has no power, the chair would not do it.

Sri C. J. MUCKANNAPPA.—Of course, the residuary powers are there. Now, coming to the point.....

Mr. SPEAKER.—My difficulty is, that the Hon'ble member is not coming to the point (*laughter*).

†Sri C. J. MUCKANNAPPA.—Sir, you have refused permission to move the privilege motion. Now, you allow the Opposition Leader to raise the issue and cite authority and you say, if there is a case, you will again think over and revise your order. If you go on doing like this, where is the end, Sir ?

Mr. SPEAKER.—I have caught the point of the member.

Sri G. V. GOWDA.—When the Speaker disallowed the motion, he should have announced the motion and made it known to this House.

Mr. SPEAKER.— Has the Hon'ble member any particular authority or any particular rule in support of what he says ? If so, he can draw the attention of the chair to it. Let him not make a general statement.

Sri G. V. GOWDA.—Rule 180 Sir.

Mr. SPEAKER.—I will consider that also.

†ಶ್ರೀ ಎಸ್. ಶಿವಪ್ಪ.—ತಾವು ಈಗ ಕೊಟ್ಟಂಥ ರೂಲಿಂಗ್‌ನ್ನು ಪ್ರಶ್ನೆಮಾಡಿ ಆ ರೂಲಿಂಗ್‌ನ್ನು ರಿವೈಸ್‌ಮಾಡಿ ಪುನಃ ಕೊಟ್ಟಿರುವುದಕ್ಕೆ ಅಥಾರಿಟಿ ಕೋಟ್ ಮಾಡುತ್ತಾಇಲ್ಲ. ನಾನು ಸಭೆಯ ಗಮನಕ್ಕೆ ತರುತ್ತಾ ಇರುವುದು ಏನೆಂದರೆ ಈಗ ಏನೊಂದು ಪ್ರಸಂಗ ನಡೆದಿದೆಯೋ ಅದೇ ಬಗೆಯ ಪ್ರಸಂಗಗಳು ದೇಶದ ಬೇರೆ ಕಡೆ ನಡೆದಂಥ ಸಂದರ್ಭದಲ್ಲಿ ಆಯಾಯಾ ಶಾಸನ ಸಭೆಗಳು ಏನು ತೀರ್ಮಾನ ಮಾಡಿವೆ ಎಂಬುದಕ್ಕೆ ಮಧ್ಯ ಪ್ರದೇಶದ ನಿದರ್ಶನ ಇದೆ. ಅಲ್ಲಿ ಶಾಸನ ಸಭೆಯ ಹೊರಗಡೆ ಇದೇ ತರಹ ಪ್ರಸಂಗ ನಡೆದು ಅದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದ್ದಾರೆ. ಒಬ್ಬ ಮಾನ್ಯ ಸದಸ್ಯರ ವಿಷಯದಲ್ಲಿ ಅನಹ್ಯಕರವಾದ ರೀತಿಯಲ್ಲಿ ಹೇಳಿದ್ದರಿಂದ ಅದನ್ನು ಸಭೆಯ ಪ್ರಿವಿಲೇಜ್ ಎಂದು ಗಣನೆಮಾಡಿ ಹಕ್ಕು ಬಾಧ್ಯತೆಗಳ ಸಮಿತಿಗೆ ಕಳುಹಿಸಿದರು. ಅದೇ ರೀತಿ ಇಲ್ಲೂ ಶಾಸನ ಸಭೆಯಲ್ಲಿ ಕ್ರೋಡೀಕೃತವಾಗಿರತಕ್ಕ ಸಭೆಯ ಗೌರವ ಇದರಲ್ಲಿ ಅಡಕವಾಗಿದೆ. ಈ ಒಂದು ಪರಿಸ್ಥಿತಿಯನ್ನು ತೀವ್ರವಾಗಿ ಸಮಾಧಾನದಿಂದ ಪರ್ಯಾಲೋಚಿಸಿದರೆ ನಾವು ದೇಶದ ಇತರ ಶಾಸನ ಸಭೆಗಳಿಗೆ ಆದರ್ಶ ಹಾಕಿ ಕೊಟ್ಟ ಹಾಗಾಗುತ್ತದೆ. ಮಧ್ಯ ಪ್ರದೇಶದಲ್ಲಿ ಈಗಾಗಲೇ ಒಂದು ನಿದರ್ಶನ ಇದೆ. ಮಂತ್ರಿ ವರ್ಯರ ಕೊಠಡಿಯಲ್ಲಿ ಈ ಸಭೆಯ ಮಾನ್ಯ ಸದಸ್ಯರಿಗೆ ಅಗೌರವಕ್ಕೆ ಅವಮಾನದ ಪ್ರಸಂಗ ಇದು. ಆದ್ದರಿಂದ ದಯವಿಟ್ಟು ಪ್ರಿಸಿಂಗ್‌ಟ್ಸ್ ಎಂದರೆ ಏನೆಂಬುದಕ್ಕೆ ಒಂದು ರೂಲಿಂಗ್ ಕೊಟ್ಟಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ :

Madhya Pradesh Proceedings of October 1961, page 48. There it is said what 'pricinct means'

> "In the case of the Members of the Legislative Council, pricincts of the House shall mean any room of the Secretariat building.....

Mr. SPEAKER.—Is it the Legislature Secretariat or the Secretariat of the Government ? Is it the Legislature Secretariat ?

Sri S. SIVAPPA.—In a way, Minister's Chambers also include this. Likewise, Sir, there are similar decisions. The most important thing is that an Hon'ble Member of this House was ill-treated while he was discharging his important duty.

Mr. SPEAKER.—I do not want any debate before I apply my mind. I will look into every one of them and others also wherever possible.

MYSORE OFFICIAL LANGUAGE BILL, 1963

(*Motion to consider*—continned.)

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ ಮೊನ್ನೆ ನಂಜೆ ನಾನು ಮಾತನಾಡುತ್ತಾ ಇದ್ದೆ. ಆಗ ಮಾಡುತ್ತಾ ಇದ್ದ ಭಾಷಣವನ್ನು ಈಗ ಮುಂದುವರಿಸುತ್ತೇನೆ. ಮೊನ್ನೆ ರಾತ್ರಿ ಈ ಮಾನ್ಯ ಸಭೆಯ ಸದಸ್ಯರೊಬ್ಬರು ಆಕಸ್ಮಿಕ ಮರಣಕ್ಕೆ ಒಳಗಾಗಿ ನೆನ್ನೆ ಸಭೆಯನ್ನು ಮುಂದೆ ಹಾಕಲಾಯಿತು. ಆದ್ದರಿಂದ ನಾನು ಮೊನ್ನೆಯಿಂದ ನನ್ನ ಕಾಲ ಮೇಲೆ ನಿಂತುಕೊಂಡು ಅರ್ಧ ಭಾಷಣ ಆಗಿರುವುದರಿಂದ ಒಂದು ರೀತಿಯಲ್ಲಿ ನಿದ್ದೆ ಗೇಡು ಎಂದು ಹೇಳಬಹುದು. ಭಾಷಣ ಮುಗಿಯದೇ ಇರುವುದರಿಂದ ತೊಂದರೆಯಾಗುತ್ತದೆ, ಹಿಂದೆ ಹೇಳಿದ್ದನ್ನೇ ಪುನಃ ಹೇಳುವ ಸಂಭವಉಂಟು ಅದಕ್ಕೆ ಈಗ ಸ್ವಲ್ಪ ಹೆಚ್ಚು ಕಾಲ ಕೊಟ್ಟರೆ ಒಳ್ಳೆಯದು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ನಾನು ಈ ರಾಜ್ಯದ ಆಡಳಿತ ಭಾಷೆ ಕಡ್ಡಾಯವಾಗಿ ಕನ್ನಡ ಆಗಬೇಕು ಎನ್ನುವ ಬಗ್ಗೆ ಹೇಳಿದಂಥ ಕೆಲವು ಶಬ್ದಗಳನ್ನು ವಿಸ್ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಮಸೂದೆ ಮಾನ್ಯ ಸದಸ್ಯರಾದ ಎಸ್. ಎಂ. ಕೃಷ್ಣ ಅವರು ಹೇಳಿದ ಹಾಗೆ ಸರಳ ಮತ್ತು ಸುಂದರವಾಗಿಲ್ಲ. ಅವರಿಗೆ ಹಾಗೆ ಕಂಡಿದ್ದರೆ ನನಗೆ ಕಾಂಚನ ಮೃಗದ ರೂಪದಲ್ಲಿ ಇರುವ ಮಾರೀಚನ ಹಾಗೆ ಇದು ಕಾಣುತ್ತಾ ಇದೆ. ಈ ವಿಷಯವನ್ನು ಏಮರ್ಶೆ ಮಾಡುವುದು ಒಳ್ಳೆಯದು. ಇದರೊಳಗೆ ಹೇಗೆ ಆ ದೃಷ್ಟಿ ಕಾಣುತ್ತದೆ ಎಂದು ನನ್ನ ಅಭಿಪ್ರಾಯವನ್ನು ನಾನು ಸಭೆಯ ಮುಂದೆ ಇಡುತ್ತೇನೆ. ತಾವು ಇದನ್ನು ದಯವಿಟ್ಟು ಓದಬೇಕು, ಓದಿದ್ದೀರಿ ಎಂದು ಭಾವಿಸುತ್ತೇನೆ. ಇದರಲ್ಲಿ ಒಂದು ಮಾತು–ಕನ್ನಡದಲ್ಲಿ ಓದುತ್ತೇನೆ–2ನೇ ಪ್ರಕರಣ ಎಂದು ಕರೆಯುತ್ತೇವೆ–ಕ್ಲಾಸ್ ಅನ್ನುವುದನ್ನು ಪ್ರಕರಣ ಎಂದು ಕನ್ನಡಿಸಿದ್ದಾರೆ ಅದು ಬೇರೆ ಮಾತು–2ನೇ ಪ್ರಕರಣದಲ್ಲಿ 'ಕನ್ನಡವು ಮೈಸೂರು ರಾಜ್ಯದ ರಾಜ ಭಾಷೆಯಾಗಿರತಕ್ಕದ್ದು' ಎಂಬುದನ್ನು ಬಿಟ್ಟರೆ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯಾಗಿ ಮಾಡುವುದಕ್ಕೆ ಇನ್ನಾವ ಪ್ರಕರಣವೂ ಸಹಕಾರಿಯಾಗಿಲ್ಲ. ತಾವು ಇದನ್ನು ದಯವಿಟ್ಟು ಓದಬೇಕು 3-4-5-6 ಪ್ರಕರಣಗಳು ಇವೆ. ಅವು ಈ 2ನೇ ಪ್ರಕರಣದಲ್ಲಿ ಕೊಡತಕ್ಕ ಅಧಿಕಾರವನ್ನು ಮೊಟಕು ಮಾಡತಕ್ಕವು ಅಥವಾ ಅಡ್ಡಿ ಪಡಿಸತಕ್ಕವು ಅಥವಾ ವಿಫಲಗೊಳಿಸತಕ್ಕವು ಎಂಬುದನ್ನು ನಾವು ಅವನ್ನು ಓದುವುದರಿಂದ ಕಂಡುಕೊಳ್ಳಬಹುದು. ಆ ದೃಷ್ಟಿಯಿಂದಲೂ ಕನ್ನಡ ಆಡಳಿತ ಭಾಷೆಯಾಗುತ್ತದೆ ಅನ್ನುವ ರೂಪದಲ್ಲಿ ಇಂಗ್ಲೀಷನ್ನು 1965ನೇ ಇಸವಿಯಿಂದ ಆಚೆಗೂ ಮುಂದುವರಿಸಿಕೊಂಡು ಹೋಗುವುದಕ್ಕೆ ಯಾವ ಅಭ್ಯಂತರವೂ ಕಾನೂನು ದೃಷ್ಟಿಯಿಂದ ಇರತಕ್ಕದ್ದಲ್ಲ ಎಂಬ ಕಾರಣಕ್ಕಾಗಿಯೇ ತಂದಿರತಕ್ಕ ಮಸೂದೆ ಇದು ; ಎನ್ನುವುದು ಇಲ್ಲಿ ಗಮನಿಸಬೇಕಾದ ವಿಷಯ. ಆದ್ದರಿಂದ ಮಾನ್ಯ ಶ್ರೀ ಕೃಷ್ಣ ರವರನ್ನು ಕೇಳಿಕೊಳ್ಳುವುದಿಷ್ಟೆ: ಇದು ಅಷ್ಟು ಸರಳ ಮತ್ತು ಸುಂದರವಾದ ಮಸೂದೆ ಅಲ್ಲ. ಈಗ ಏನು ಸರಕಾರದ ಥೋರಣೆ ಭಾಷೆಯ ಬಗ್ಗೆ ಇದೆಯೋ ಆ ಥೋರಣೆಯನ್ನೇ ಯಾವ ಅಡ್ಡಿ ಆಂತಕ ಇಲ್ಲದೆ ಮುಂದುವರಿಸಿಕೊಂಡು ಹೋಗುವುದಕ್ಕೆ ಕಾನೂನು ಬದ್ಧವಾಗಿ ಅಧಿಕಾರವನ್ನು ಈ ಸಭೆ ಸರಕಾರದವರಿಗೆ ಕೊಡಬೇಕೆಂದು ಕೇಳುತ್ತಾ ಇದ್ದಾರೆ. ಮಾನ್ಯ ಮುಖ್ಯ ಸಚಿವರು ಹೇಳಿದ ಹಾಗೆ ಪ್ರಧಾನಿ ಅವರು ಹೇಳಿದ್ದಾರೆ–1965ರ ನಂತರವೂ ಇಂಗ್ಲೀಷನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಅವರು ಈ ದೇಶದ ಜನರಿಗೆ ಭರವಸೆ ಕೊಟ್ಟಿದ್ದಾರೆ ಆ ಭರವಸೆಯನ್ನು ಈಡೇರಿಸುವುದಕ್ಕೆ ಈ ಮಸೂದೆ ಎನ್ನುವುದು ಬಹಳ ಸುಸ್ಪಷ್ಟ. ಆದುದರಿಂದ ನಾನು ಈ ಮಸೂದೆಗೆ ತಿದ್ದುಪಡಿ ಸೂಚಿಸಿದ್ದೆ, ಅದರ ಪ್ರಕಾರ ಏನು ಹೇಳುತ್ತೇನೆ ಎಂದರೆ–ಬಹಳ ಸ್ಪಷ್ಟವಾಗಿ ಹೇಳಿದ್ದೇನೆ 2ನೇ ಪ್ರಕರಣವು ಸಾರ್ಥಕವಾಗಬೇಕಾದರೆ–ನಾವು ನೇರವಾಗಿ ಏನು ಹೇಳಬೇಕೆಂದರೆ–ಸ್ವಾತಂತ್ರ್ಯ ನಂತರವೂ ಮುಂದುವರಿದುಕೊಂಡು ಬಂದಂಥ ಇಂಗ್ಲೀಷ್ ಭಾಷೆಯ ಬಳಕೆಯನ್ನು 1965ನೇ ಇಸವಿಯಿಂದ ಆಚೆಗೆ ಮುಂದುವರಿಸಿಕೊಂಡು ಹೋಗದೇ ಇರುವುದಕ್ಕೆ ಮತ್ತು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ತಂದಿರತಕ್ಕ ಮಸೂದೆ ಇದು ಎಂದು ಹೇಳಿ ಇದನ್ನು ಕಾರ್ಯಗತ ಮಾಡುವುದಕ್ಕೆ ಏನು ಕ್ರಮಗಳನ್ನು ಎಲ್ಲೆಲ್ಲ ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ಈ ಮಸೂದೆಯ ಅಭಿಪ್ರಾಯವಾಗಿರಬೇಕು.